ಮತ್ತು ಇದರಿಂದ ಜನರಲ್ಲಿ ನಂಬಿಕೆ ಹೋಗುತ್ತದೆ. ಕನ್ನಡದ ಬಗ್ಗೆ ಕಾಳಜಿ ಇಟ್ಟುಕೊಂಡಿರುವವರು ನೀವು, ನಿಮ್ಮ ಬಗ್ಗೆ ನೇರವಾಗಿ ಕೇಳುತ್ತಿದ್ದೇವೆ. ನಿಮ್ಮ ಸರ್ಕಾರದ ನೇರವಾದ ಕಾರ್ಯಕ್ರಮ ಏನು? ಇವರು 250 ಕನ್ನಡ ಬೆರಳಚ್ಚು ಯಂತ್ರಗಳನ್ನು ಕೊಂಡುಕೊಳ್ಳುವುದಕ್ಕೆ ಟೆಂಡರ್ ಕರೆದಿದ್ದಾರೆ. ನನ್ನ ಪ್ರಕಾರ ತಕ್ಷಣಕ್ಕೆ ಬೇಕಾಗಿರತಕ್ಕ ಬೆರಳಚ್ಚು ಯಂತ್ರಗಳು 2500. ಮತ್ತೆ ತಾವು ಹೇಳುತ್ತಿದ್ದೀರಿ. ಒಂದನೇ ತಾರೀಖಿನಿಂದ ನಮ್ಮ ಟಿಪ್ಪಣಿ ಬರತಕ್ಕದ್ದು. ಕಡತ, ಮಂತ್ರಿಗಳ ಸಹಿ ಎಲ್ಲಾ ಕನ್ನಡದಲ್ಲಿ ಎಂದು ಹೇಳುತ್ತಿದ್ದೀರಿ. ನಾವು ಸ್ವಲ್ಪ ಸುತ್ತಾಡಿ ನೋಡಿದ್ದೇವೆ. ಅದು ಎನೂ ಕಾಣಲಿಲ್ಲ. ನಾವು, ಬಾಬಗೌಡರು ಮತ್ತು ನಂಜುಂಡಸ್ವಾಮಿಯವರು ಒಂದು ತೀರ್ಮಾನ ಮಾಡಿದ್ದೇವೆ. ತಾವು ಸ್ಪಷ್ಟವಾಗಿ ಕನ್ನಡವನ್ನು ಜಾರಿಗೆ ತರತಕ್ಕ ಕಾರ್ಯಕ್ರಮವನ್ನು ಈ ಸದನದಲ್ಲಿ ಹೇಳಲಿಲ್ಲ ಎಂದರೆ ಈ ಕಾರ್ಯಕ್ರಮವನ್ನು ನಾವೇ ಕೈಗೊಳ್ಳುತ್ತೇವೆ. ಆದುದರಿಂದ ನಾವು ಕೈಗೊಂಡರೆ ನಿಮಗೆ ಸಂತೋಷವಾಗುತ್ತದೆ. ನೀವು ಹೇಳತಕ್ಕ ಆದೇಶಗಳನ್ನು ನಾವು ಪಾಲನೆ ಮಾಡುತ್ತಿದ್ದೇವೆ. ತಾವು ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಸ್ಪಷ್ಟವಾಗಿ, ಸ್ಥೂಲವಾಗಿ ಸಮಗ್ರ ನೀತಿಯನ್ನು ತಾವು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳುವಂತಹದ್ದು ಸರಿ. ಏಕೆಂದರೆ, ಇದರ ಬಗ್ಗೆ ಹೇಳಿಕೆ ಕೊಡಬೇಕೆಂದು ಹೇಳಿದ್ದೀರಿ. 8ನೇ ತಾರೀಖಿಗೆ ನಾನು ಇದರ ಬಗ್ಗೆ ಸಮಗ್ರವಾದ ನಮ್ಮದು ನೀತಿ ಏಪ್ರಿಲ್ 1ನೇ ತಾರೀಖಿನಿಂದ ಏನಿದೆ ಎಂಬುದನ್ನು ಘೋಷಿಸುವವನಿದ್ದೇನೆ. ನಾವು ಎರಡು ಹಂತದ ಕಾರ್ಯಕ್ರಮವನ್ನು ಘೋಷಣೆ ಮಾಡಿದ್ದೇವೆ. ಏಪ್ರಿಲ್ 1ನೇ ತಾರೀಖಿನಿಂದ ಕೆಲವು ಕಾರ್ಯಕ್ರಮ. ಅದನ್ನು ನಾವು ಅನುಷ್ಠಾನ ಮಾಡುತ್ತಿದ್ದೇವೆ. ಜೂನ್ 1ನೇ ತಾರೀಖಿನಿಂದ ಎರಡನೆಯ ಹಂತದ ಕಾರ್ಯಕ್ರಮ ಕನ್ನಡದ ಅನುಷ್ಠಾನದ ಬಗ್ಗೆ ನಾವು ಕೊಟ್ಟಿದ್ದೇವೆ. ಇದರ ಬಗ್ಗೆ ಸಂಪೂರ್ಣವಾದ ವಿವರ ಎಷ್ಟು ಜಾರಿ ಮಾಡಿದ್ದೇವೆ, ಯಾವ ರೀತಿಯಲ್ಲಿ ಜಾರಿ ಮಾಡಿದ್ದೇವೆ ಎನ್ನುವ ಬಗ್ಗೆ ಒಂದು ಸಂಪೂರ್ಣವಾದ ಹೇಳಿಕೆಯನ್ನು 8ನೇ ತಾರೀಖಿಗೆ ನಾನು ಕೊಡುತ್ತೇನೆ.

**3) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಸುರಕ್ಷಿತ ಅರಣ್ಯಕ್ಕೆ ಬೆಂಕಿ.**

* ಶ್ರೀ ವಿನಯಕುಮಾರ್ ಸೊರಕೆ : ಮಾನ್ಯಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಸುರಕ್ಷಿತ ಅರಣ್ಯಕ್ಕೆ ಬೆಂಕಿ ಬಿದ್ದು ಸಂಪೂರ್ಣ ಕಾಡು ಸುಟ್ಟು ಹೋಗುವಂತಹ ಪರಿಸ್ಥಿತಿ ಅಲ್ಲಿ ನಡೆಯುತ್ತಿದೆ. ಕಳೆದ ಐದಾರು ದಿವಸಗಳಿಂದ ಕಾಡಿಗೆ ಬೆಂಕಿ ಬಿದ್ದು ಒಂದು ಮರಕ್ಕಿಂತಲೂ ಎತ್ತರವಾಗಿ ದಟ್ಟವಾಗಿ ಬೆಂಕಿ ಹಬ್ಬಿಕೊಂಡು ಇದ್ದಂತಹ ಕಾಡು ಸಂಪೂರ್ಣ ನಾಶವಾಗುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಕಳೆದ ಮುರ್ನಾಲ್ಕು ವರ್ಷಗಳ ಹಿಂದೆಯೂ ಕೂಡ ಸಂಬಂಧಪಟ್ಟ ಅರಣ್ಯ ಇಲಾಖೆಯವರ ಅಜಾಗರೂಕತೆಯಿಂದ ಅದೇ ರೀತಿಯ ಅನಾಹುತ ನಡೆಯುತ್ತಾ ಇತ್ತು. ಆನಂತರ ಈ ಇಲಾಖೆಯ ವತಿಯಿಂದ ಫೈರ್‌ಮಾರ್ಕ್ ಮಾಡುವಂತಹದ್ದು ಇದಕ್ಕೆ ಪ್ರತಿವರ್ಷ ಕೂಡ ತಾವು ದುಡ್ಡು ಇಡುತ್ತೀರಿ. ಫೈರ್‌ಮಾರ್ಕ್ ಮಾಡಲಿಕ್ಕೆ ಅರಣ್ಯವನ್ನು ಬೆಂಕಿಯಿಂದ ರಕ್ಷಣೆ ಮಾಡಲಿಕ್ಕೆ ಹಣ ಇಟ್ಟರೂ ಕೂಡ ಈ ಸಲ ಪುನಃ ಅರಣ್ಯ ಹತ್ತಿಕೊಂಡು ಉರಿಯುವಂತಹ ವ್ಯವಸ್ಥೆಯನ್ನು ನಾವು ಕಾಣುತ್ತಿದ್ದೇವೆ. ನರ್ಸರಿಗೆ ಸೋಶಿಯಲ್ ಫಾರೆಸ್ಟ್‌ಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತೀರಿ. ಇದ್ದಂತಹ ಕಾಡನ್ನು ರಕ್ಷಣೆ ಮಾಡಲಿಕ್ಕೆ ಯಾವರೀತಿಯ ಕಾರ್ಯಕ್ರಮವಿದೆ? ಐದಾರು ದಿವಸಗಳಿಂದ ಬೆಂಕಿ ಹತ್ತಿಕೊಂಡು ಉರಿಯುತ್ತಿದ್ದರೂ ಕೂಡ ತಮ್ಮ ಇಲಾಖೆಯವರು ಏನು ಮಾಡುತ್ತಿದ್ದಾರೆ? ವರ್ಗಾವಣೆಯ ವಿಚಾರದಲ್ಲಿ ಇದ್ದಾರೆಯೇ?

ಆವರು ಯಾವ ಬಿಸಿಯಲ್ಲಿದ್ದಾರೆ? ಬೆಂಕಿ ಹತ್ತಿಕೆಂಡು ಉರಿಯುತ್ತಿದ್ದರೆ ಆ ಕಾಡು ಉಳಿಯಲಿಕ್ಕೆ ಹೇಗೆ ಸಾಧ್ಯತೆ ಇದೆ? 500 ವರ್ಷಗಳ ಹಳೆಯದಾದ ಮರಗಳಿಗೆ ಬೆಂಕಿ ಹತ್ತಿಕೊಂಡು ಉರಿಯಬೇಕಾದರೆ ಅದನ್ನು ರಕ್ಷಣೆ ಮಾಡಲಿಕ್ಕೆ ಬೆಂಕಿಯನ್ನು ನಂದಿಸಲಿಕ್ಕೆ ಯಾವ ರೀತಿಯ ಮಾಹಿತಿ ಕಾರ್ಯಕ್ರಮ ಇಲಾಖೆಯ ಮುಖಾಂತರ ಬಂದಿದೆ? ಅದರ ಬಗ್ಗೆ ತಮಗೆ ಯಾವ ರೀತಿಯ ಮಾಹಿತಿ ಬಂದಿದೆ? ಈವತ್ತು ಅದನ್ನು ತಕ್ಷಣ ಮಾಡಲಿಕ್ಕೆ ಯಾವ ರೀತಿಯ ಕಾರ್ಯಕ್ರಮವನ್ನು ತಾವು ಹಮ್ಮಿಕೊಳ್ಳುತ್ತೀರಿ ಎಂದು ತಮ್ಮ ಮುಖಾಂತರ ಅರಣ್ಯ ಸಚಿವರಿಗೆ ಕೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಪಿ. ಕೇಶವಮೂರ್ತಿ : (ಅರಣ್ಯ ಇಲಾಖೆಯವರು) ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ವರದಿಯನ್ನು ತರಿಸಲು ಸೂಚನೆಯನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ನಾಳೆ ಸವಿಸ್ತಾರವಾದ ಒಂದು ಹೇಳಿಕೆಯನ್ನು ಕೊಡುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ : ವರದಿ ತರಿಸುವ ಅವಶ್ಯಕತೆಯಿಲ್ಲ. ಮಾನ್ಯ ಸಚಿವರು ತಕ್ಷಣ ಅಲ್ಲಿಗೆ ಭೇಟಿಕೊಟ್ಟು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಅವರಿಗೆ ಸೂಚನೆ ಕೊಡಬೇಕು.

ಶ್ರೀ ಬಿ. ಎಂ. ಇದಿನಬ್ಬ : ಅರಣ್ಯದಲ್ಲಿ ನಂಜು ಬಿದ್ದರೆ ನನಗೂ ಕೂಡ ತೊಂದರೆಯಾಗುತ್ತದೆ.

ಶ್ರೀ ವಿನಯಕುಮಾರ್ ಸೊರಕೆ : ಬೆಂಕಿ ಬಿದ್ದು ಅರಣ್ಯ ಸಂಪೂರ್ಣ ನಾಶವಾಗುತ್ತಿದೆ. ಮಾನ್ಯ ಸಚಿವರು ತಕ್ಷಣ ಭೇಟಿ ಕೊಟ್ಟು ಸಂಬಂಧಪಟ್ಟ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಕರೆಯಿಸಿ ಮಾತನಾಡಬೇಕು.

ಶ್ರೀ ಬಿ. ಎಂ. ಇದಿನಬ್ಬ : ಅರಣ್ಯ ಮಂತ್ರಿಗಳಲ್ಲಿ ಕೇಳುವುದು ಏನೆಂದರೆ ಬೆಂಕಿಯನ್ನು ಆರಿಸುವ ವ್ಯವಸ್ಥೆಯನ್ನು ಏನಾದರೂ ಮಾಡಿದ್ದೀರಾ? ಪಂಜದ ಕಡೆಯಿಂದ ಉಪ್ಪಿನಂಗಡಿಯವರೆಗೆ ಹಬ್ಬಿದೆ. ಮಾನ್ಯ ಸೊರಕೆಯವರು ಹೇಳಿದ್ದುದು ಸತ್ಯ. ಬೆಂಕಿಯನ್ನು ನಂದಿಸಲು ಏನು ಮಾಡಿದ್ದೀರಿ?

ಶ್ರೀ ಎಂ. ಪಿ. ಕೇಶವಮೂರ್ತಿ : ಅಲ್ಲಿ ಏನು ನಡೆದಿದೆ ಎನ್ನುವ ಬಗ್ಗೆ ನಾನು ವರದಿ ತರಿಸುತ್ತೇನೆ. ಸದನ ಮುಗಿದ ನಂತರ ನಾನೂ ಅಲ್ಲಿಗೆ ಹೋಗುತ್ತೇನೆ.

ಅಧ್ಯಕ್ಷರು : ಕ್ರಮ ತೆಗೆದುಕೊಂಡು ಏನಾಗಿದೆಯೆಂದು ಹೇಳುತ್ತೇನೆಂದು ಹೇಳಿದ್ದಾರೆ.

**4) ರಾಜ್ಯದ ಕೇಂದ್ರಕಾರಾಗೃಹದಲ್ಲಿಕನಕಪುರ ತಾಲ್ಲೂಕಿನ ಹುಡುಗನ ಮರಣ.**

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಸರ್ಕಾರದಿಂದ ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಆ ಉದ್ದೇಶದಿಂದ ತಮ್ಮ ಒಪ್ಪಿಗೆ ಪಡೆದು ಮಾನ್ಯ ದೇಶಪಾಂಡೆಯವರು, ನಾನು ಮತ್ತು ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇವೆ. ಇದುವರೆಗೂ, ಕೂಡ ಕರ್ನಾಟಕದಲ್ಲಿ ಪೋಲೀಸ್ ಕಸ್ಟಡಿಯಲ್ಲಿ, ಪೋಲೀಸ್ ಲಾಕಪ್‌ಗಳಲ್ಲಿ